# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**IID**:03/2025

ಎಂ.ಡಬ್ಲ್ಯೂ-1

**<u>ದಿನಾಂಕ 07.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಎಸ್.ಎಂ.ಟಿ. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಸ್ಥೆಯ ಮಾಲೀಕನಾಗಿರುತ್ತೇನೆ. ನನಗೆ ಸಿ.ಎಲ್.ಆರ್. ಪರವಾನಗಿ ಇರುವುದಿಲ್ಲ. ಸಾಕ್ಷಿ ಮುಂದುವರೆದ ನನಗೆ ಸಿ.ಎಲ್.ಆರ್. ಎಂದರೆ ಏನು ಎಂದು ಗೊತ್ತಿಲ್ಲ ಎನ್ನುತ್ತಾರೆ. ಫಾರ್ಮ್-6(Form-6) ದಾಖಲೆ ನನ್ನ ಬಳಿ ಇರುತ್ತದೆ. ಸದರಿ ದಾಖಲೆ ಚಾಲ್ತಿಯಲ್ಲಿ ಇರುತ್ತದೆ. ಸದರಿ ಪರವಾನಗಿಯನ್ನು ನಾನು 500 ಜನ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಪಡೆದಿರುತ್ತೇನೆ. ನಾನು ಹೊರ ಗುತ್ತಿಗೆ ಕರಾರನ್ನು ಟೆಂಡರ್ ಮೂಲಕ ಪಡೆದಿರುತ್ತೇನೆ. ಹೊರ ಗುತ್ತಿಗೆ ಆದೇಶವನ್ನು ನನಗೆ ದಿನಾಂಕಃ22.04.2025 ರಂದು ನೀಡಿರುತ್ತಾರೆ. ಸದರಿ ಹೊರ ಗುತ್ತಿಗೆ ಆದೇಶವನ್ನು ನಮಗೆ 1 ವರ್ಷದ ಅವಧಿಗೆ ನೀಡಿರುತ್ತಾರೆ. ಸದರಿ ಆದೇಶದಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿರುವ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದರು. ಸದರಿ ಆದೇಶದ ಪ್ರಕಾರ ನಾನು ನೇಮಕಾತಿಯನ್ನು ಮಾಡಿಕೊಂಡಿರುತ್ತೇನೆ. ನಾನು 70 ಜನಕ್ಕೆ ಟೆಂಡರ್ ಮಾಡಿದ್ದೆ. ಸದರಿ 70 ಜನರನ್ನು ನಾನು ನಿಯಮಾವಳಿಗಳ ಪ್ರಕಾರ ನೇಮಕಾತಿ ಮಾಡಿಕೊಂಡಿರುತ್ತೇನೆ. ಸದರಿ 70 ಜನ ಅಸ್ಥಿತ್ವದಲ್ಲಿ ಇದ್ದ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದೆ. ಸಾಕ್ಷಿ ಮುಂದುವರೆದ ಅದರಲ್ಲಿ ಎಸ್.ಎಸ್.ಎಲ್.ಸಿ. ಅನುತ್ತೀರ್ಣ ಹೊಂದಿರುವವರು ಕೆಲಸ ಮಾಡುತ್ತಿದ್ದರು ಅವರನ್ನು ಬದಲಾವಣೆ ಮಾಡಿ ನಿಯಮಗಳ ಪ್ರಕಾರ ಹೊಸಬರನ್ನು ನೇಮಕ ಮಾಡಿಕೊಂಡಿದ್ದೆ. ಎಸ್.ಎಸ್.ಎಲ್.ಸಿ. ಅನುತ್ತೀರ್ಣ ಹೊಂದಿದ ಕಾರ್ಮಿಕರಿಗೆ ನೇಮಕಾತಿ ಆದೇಶವನ್ನು ನೀಡಿರುತ್ತೇನೆ. ಸಾಕ್ಷಿ ಮುಂದುವರೆದ ಇಲಾಖೆಯವರು ಅದಕ್ಕೆ ಅನುಮತಿ ನೀಡಿರಲಿಲ್ಲ ಎನ್ನುತ್ತಾರೆ.

ಎಸ್.ಎಸ್.ಎಲ್.ಸಿ. ಅನುತ್ತೀರ್ಣ ಆಗಿದ್ದವರನ್ನು ನಾನು ನೇಮಕಾತಿ ಮಾಡಿಕೊಂಡು ಸರ್ಕಾರಿ ಆದೇಶವನ್ನು ಉಲ್ಲಂಘನೆ ಮಾಡಿರುತ್ತೇನೆ ಎಂದರೆ ಸಾಕ್ಷಿ ಅವರು ಎಸ್.ಎಸ್.ಎಲ್.ಸಿ. ಅನುತ್ತೀರ್ಣ ಆಗಿರುವ ವಿಚಾರ ನನಗೆ ತಿಳಿದಿರಲಿಲ್ಲ, ಅವರಿಗೆ ಅವಕಾಶ ಕೊಟ್ಟ ನಂತರ ಅವರನ್ನು ಕೆಲಸದಿಂದ ತೆಗೆದಿರುತ್ತೇನೆ. ನಾನು ಸದರಿ ಕಾರ್ಮಿಕರಿಗೆ ನೇಮಕಾತಿ ಆದೇಶವನ್ನು ಕೊಡದೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಾನು ಈ ನೇಮಕಾತಿ ಆದೇಶ ನೀಡಿರುವ ಕಾರ್ಮಿಕರು ಹೊಸ ಕಾರ್ಮಿಕರು ಅಲ್ಲ, ಅದೇ ಸಂಸ್ಥೆಯಲ್ಲಿ 7–8 ವರ್ಷಗಳಿಂದ ಸೇವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 70 ಜನ ಕಾರ್ಮಿಕರಲ್ಲಿ 9 ಜನ ಕಾರ್ಮಿಕರು ಹೊಸಬರು ಉಳಿದವರು ಹಳಬರು. ಸದರಿ 70 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿದ್ದ ಬಗ್ಗೆ ನಾನು ಸರ್ಕಾರಕ್ಕೆ ಮಾಹಿತಿ ನೀಡಿರುತ್ತೇನೆ. ಈ ತೆಗೆದು ಹಾಕಿದ್ದ ಕಾರ್ಮಿರ ಮಾಹಿತಿಯನ್ನು ಕೂಡ ನಾನು ಸರ್ಕಾರಕ್ಕೆ ಕೊಟ್ಟಿರುತ್ತೇನೆ. ಸರ್ಕಾರದಿಂದ ಕೊಟ್ಟಿರುವ ಆದೇಶದಲ್ಲಿ ತಾತ್ಕಾಲಿಕವಾಗಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬಹುದು ಎಂದು ನಿರ್ದೇಶನ ಇತ್ತೇ ಎಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಏಜೆನ್ಸಿ ಜವಾನರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮೊದಲನೇ ಏಜ್ಸೆಸಿ ಅಲ್ಲ ಎಂದರೆ ಸರಿ. ಸದರಿ 8 ಜನ ಕಾರ್ಮಿಕರ ಬಗ್ಗೆ ನನಗೆ ಯಾವುದೇ ದೂರುಗಳು ಬಂದಿರಲಿಲ್ಲ ಎಂದರೆ ಸರಿ. ಸದರಿ ನೌಕರರನ್ನು ವಜಾ ಮಾಡುವ ಅಧಿಕಾರ ಡಿ.ಡಿ.ಎಲ್.ಆರ್. ರವರಿಗೆ ಇರುತ್ತದೆ. ESI remittance ದಾಖಲೆಯಲ್ಲಿ principal employer ರವರ ಹೆಸರು ನಮ್ಮದೆ ಇರುತ್ತದೆ ಎಂದರೆ ಸರಿ.

ಮೈಸೂರು ಜಿಲ್ಲೆಯಲ್ಲಿ ಹೊರತು ಪಡಿಸಿ ಬೇರೆ ಜಿಲ್ಲೆಗಳಲ್ಲಿ 7 ನೇ ತರಗತಿ ತೇರ್ಗಡೆ ಹೊಂದಿರುವವರಿಗೆ ಕೆಲಸಕ್ಕೆ ತೆಗೆದುಕೊಳ್ಳಬಹುದು ಎಂದು ನಿಯಮ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಒಟ್ಟು 70 ಜನ ಪೈಕಿ ಕಾರ್ಮಿಕರನ್ನು ಮೊದಲು 2 ಜನರನ್ನು ತೆಗೆದು ಹಾಕಿ ನಂತರ ಒಬ್ಬರು ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ ಕೊಟ್ಟರು ಅದನ್ನು ತೆಗೆದುಕೊಂಡಿರುತ್ತೇನೆ ಎನ್ನುತ್ತಾರೆ. 1 ನೇ ಪಕ್ಷಗಾರರು 7 ನೇ ತರಗತಿ ತೇರ್ಗಡೆ ಹೊಂದಿಲ್ಲದಿರುವ ವಿಷಯ ಯಾವಾಗ ಗೊತ್ತಾಯಿತು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರ ಪೈಕಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿರುವ ಅಂಕ ಪಟ್ಟಿ ಕೊಟ್ಟರೆ ಕೆಲಸಕ್ಕೆ ತೆಗೆದುಕೊಳ್ಳುತಿರ ಎಂದರೆ ಆಗೊದಿಲ್ಲ ಎನ್ನುತ್ತಾರೆ.

ಕೆಲಸಕ್ಕೆ ತೆಗೆದುಕೊಳ್ಳುವಾಗ ಕಾರ್ಮಿರಕ ಮಾಹಿತಿಯನ್ನು ಪಡೆಯುವುದು ಮಾಲೀಕರ ಜವಾಬ್ದಾರಿ ಎಂದರೆ ಹೌದು. ಮಾಹಿತಿ ಪಡೆಯದೆ ಕೆಲಸ ಮಾಡಿಸುವುದು ಕಾನೂನು ಭಾಹಿರ ಎಂದರೆ ಸರಿ. 1 ನೇ ಪಕ್ಷಗಾರರಿಗೆ 1 ತಿಂಗಳ ಸಂಬಳ ಕೊಟ್ಟಿರುತ್ತೇನೆ ಎಂದರೆ ಸರಿ. 1 ನೇ ಪಕ್ಷಗಾರರ ಇ.ಎಸ್.ಐ. ಹಾಗೂ ಫಿ.ಎಫ್. ಅನ್ನು ಕಟ್ಟಿರುತ್ತೀರ ಎಂದರ ಸಾಕ್ಷಿ ಪರಿಶೀಲನೆ ಮಾಡಬೇಕು ಎನ್ನುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. 1 ನೇ ಪಕ್ಷಗಾರರನ್ನು ಕೆಲಸದಿಂದ ಯಾವ ಕಾರಣದ ಮೇಲೆ ತೆಗೆದಿರುತ್ತೀರಿ ಎಂದರೆ ಸಾಕ್ಷಿ ಅವರು ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ ಕೊಟ್ಟಿಲ್ಲ ಆದ್ದರಿಂದ ತೆಗೆದಿರುತ್ತೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದ ಈ ಸಂಬಂಧ ನಾನು ಅವರಿಗೆ ನೋಟೀಸ್ ನೀಡಿರುತ್ತೇನೆ ಎನ್ನುತ್ತಾರೆ. ಸದರಿ ನೋಟೀಸ್ ಬಗ್ಗೆ ನಾನು ಕಾರ್ಮಿಕರಿಗೆ ನಾನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ನೋಟೀಸ್ ನೀಡಿರುವ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನಾವು ನಮಗೆ ಬೇಕಾದಾಗ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡು ನಮಗೆ ಬೇಡವಾದಾಗ ಅವರನ್ನು ಕೆಲಸದಿಂದ ತೆಗೆದು ಹಾಕುತ್ತೇವೆ ಎಂದರೆ ಸರಿಯಲ್ಲ. ಸರ್ಕಾರದ ನಿಯಮಾವಳಿಗಳ ಪ್ರಕಾರ ನಾನು ನೇಮಕಾತಿಯನ್ನು ಮಾಡಿಕೊಂಡಿರುತ್ತೇನೆ.

ನಾನು ಸರ್ಕಾರಕ್ಕೆ 70 ಜನ ಪಟ್ಟಿಯನ್ನು ಕೊಟ್ಟಾಗ ಅದಕ್ಕೆ ಮೊದಲು ಸರ್ಕಾರ ಅನುಮತಿ ನೀಡಿರಲಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಸದರಿ ದಾಖಲೆಗಳು ನನ್ನ ಬಳಿ ಇರುವುದಿಲ್ಲ ಎನ್ನುತ್ತಾರೆ. ಸರ್ಕಾರಕ್ಕೆ ನಾನು 70 ಜನರ ಟೆಂಡರ್ ಅನ್ನು ಕಳುಹಿಸಿದಾಗ ಅದರಲ್ಲಿ ಅನರ್ಹಗೊಳಿಸಿದ್ದ ಬಗ್ಗೆ ಸರ್ಕಾರಿ ಆದೇಶದ ದಾಖಲೆಯನ್ನು ನೀಡಿಲ್ಲ.

**ಈ ಹಂತದಲ್ಲಿ 1 ನೇ ಪಕ್ಷಗಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**